# ದೊಡ್ಮನೆ ಹುಡುಗ!

ದೊಡ್ಡ ನಡುಮನೆಯಲ್ಲಿ ಸಿನಿಮಾ ಚರ್ಚೆಗೆಂದು ಕುಳಿತಿದ್ದ ಇಬ್ಬರಿಗೆ ಅಲ್ಪವಿರಾಮ ಹೇಳಿದರು. ಅವರ ಉಪಚಾರಕ್ಕೆ ಆಗೀಗ ಚಾಯ್ ಪಾನಿ ಸರಬರಾಜಾಗುತ್ತಿತ್ತು. ಇತ್ತ ಇನ್ನೊಂದು ಗುಂಪಿನ ಜೊತೆ ಮಾತುಕತೆ. ನಡುವೆ ಅತ್ತ ಹೋಗಿ, ಅವರ ಕುಶಲೋಪರಿ ವಿಚಾರಿಸಿಕೊಳ್ಳುವ ಔದಾರ್ಯ.

'ಲಾಂಗು–ಮಚ್ಚು ಹಿಡಿದ ನೀವು ಸೃಷ್ಟಿಸಿರುವ ಮಾದರಿಯಾದರೂ ಎಂಥದ್ದು? ಅದರಿಂದ ಆಗುವ ಸಾಮಾಜಿಕ ಪರಿಣಾಮ ಕೆಟ್ಟದ್ದಲ್ಲವೇ?'–ಕೇಳಿದ್ದೇ ಒಂದು ಕ್ಷಣ ಮೌನಕ್ಕೆ ಸರಿದರು. ಒಮ್ಮೆ ಮೂಗು ತಿಕ್ಕಿಕೊಂಡು, 'ಜನ ಬುದ್ಧಿವಂತರು' ಎಂದು ಪ್ರತಿಕ್ರಿಯೆ ನೀಡುವ ಮೊದಲು ಒಂದು ಪೀಠಿಕೆ ಹಾಕಿದರು. ತೆರೆಮೇಲೆ ತೋರಿಸಿದ್ದನ್ನೆಲ್ಲ ನಂಬುವಷ್ಟು ಜನ ಹುಂಬರಲ್ಲ ಎನ್ನುವುದು ಅವರ ಅನುಭವ. ಚಿತ್ರವೊಂದು ರೂಪುಗೊಳ್ಳುವ ಲೆಕ್ಕಾಚಾರಗಳತ್ತಲೂ ಅವರ ಮಾತು ಹೊರಳಿತು.

'ಕತೆ ಕೇಳುತ್ತೇವೆ. ಹಿಡಿಸಿದರೆ ಚಿತ್ರಕತೆ ಸಿದ್ಧವಾಗುತ್ತದೆ. ಆಮೇಲೆ ನಾಯಕನಿಗೆ ತಕ್ಕ ಅಂಶಗಳನ್ನು ಅದರಲ್ಲಿ ಹಾಕುತ್ತಾರೆ. ನಮಗೆ ಅದು ಇಷ್ಟವಾಗುವಂತೆ ಮಾಡುತ್ತಾರೆ. ನಾವೂ ಅದನ್ನು ಜನ ಇಷ್ಟಪಡಬಹುದು ಎಂದೇ ಎಣಿಸುತ್ತೇವೆ. ಚಿತ್ರೀಕರಣ ಆದಾಗ ಎಂಥ ಅದ್ಭುತ ಶಾಟ್... ಅಣ್ಣಾ ಎಂದು ಚಪ್ಪಾಳೆ ತಟ್ಟುತ್ತಾರೆ. ಅಲ್ಲಿ ವ್ಯಕ್ತವಾದ ಪ್ರತಿಕ್ರಿಯೆ ನೋಡಿ ನಮಗೂ ಆತ್ಮವಿಶ್ವಾಸ. ಆಮೇಲೆ ಸಿನಿಮಾ ಬಿಡುಗಡೆಯಾಗುತ್ತದೆ. ಅದೇ ದೃಶ್ಯಕ್ಕೆ ನೋಡುವ ಜನ ಚಪ್ಪಾಳೆ ಹೊಡೆಯುವುದಿಲ್ಲ ಎಂದಿಟ್ಟುಕೊಳ್ಳಿ; ಆಗ ನಮ್ಮ ನಂಬಿಕೆ ಸುಳ್ಳೆಂದು ಗೊತ್ತಾಗುತ್ತದೆ. ಹೊಡೆದರೆ ಲೆಕ್ಕಾಚಾರ ಸರಿಯಾಯಿತೆಂಬ ಖುಷಿ. ಜನ ಏನೆಲ್ಲಾ ಇಷ್ಟ ಪಡುತ್ತಾರೆ ಎಂದು ಪಕ್ಕಾ ಅಂದಾಜು ಮಾಡುವ ಜಾಣತನ ಇದ್ದುಬಿಟ್ಟರೆ ಸೋಲೆನ್ನುವ ಮಾತೇ ಇಲ್ಲವಲ್ಲ...' ಹೀಗೆ ಆತ್ಮಾವಲೋಕನಕ್ಕೆ ಇಳಿದ ನಟ ಹ್ಯಾಟ್ರಿಕ್ ಗೆಲುವಿನಿಂದ ಒಂದು ಕಾಲದಲ್ಲಿ ಮನೆಮಾತಾದವರು. ಆಗೀಗ ಪ್ರಯೋಗಗಳಿಗೆ ಒಡ್ಡಿಕೊಂಡರೂ ಜನಪ್ರಿಯ ಧಾಟಿಯನ್ನೇ ಇಷ್ಟಪಟ್ಟವರು. ಪರ್ಯಾಯ ಸಿನಿಮಾಗಳ ನಿರ್ದೇಶಕರಿಗೆ ಕಾಲ್‌ಷೀಟ್ ಕೊಟ್ಟ ದೊಡ್ಡ ಮನಸ್ಸು ಅವರದ್ದು. ಆದರೆ, ಯಶಸ್ಸನ್ನು ಕೊಟ್ಟ ನಿರ್ದೇಶಕರಿಗೆ ಮಣೆಹಾಕುವ ಜಾಯಮಾನ. ಹಾಕಿದ ಬಂಡವಾಳ ನಿರ್ಮಾಪಕರಿಗೆ ವಾಪಸ್ ಬರಬೇಕೆನ್ನುವ ಕಾಳಜಿ.

ನಾಯಕತ್ವದ ಪ್ರಶ್ನೆ ಬಂದಾಗಲೆಲ್ಲಾ ಅವರದು ಸಂಕೋಚದ ಮಾತು. ಕನ್ನಡಕ್ಕೆ ಕುತ್ತು ಬಂದಾಗ ಒಂದು ದನಿ ಅವರದ್ದೂ ಹೊರಡುತ್ತದೆ. ಎದೆನೋವು ಕಾಣಿಸಿಕೊಂಡು ಆಸ್ಪತ್ರೆ ಸೇರಿದಾಗ ಹೊರಗೆ ಜನಸಂದಣಿ ಜಮಾಯಿಸಿದಾಗ ಅವರ ಜನಪ್ರಿಯತೆ ಎಂಥದ್ದು ಎನ್ನುವುದು ಮತ್ತೆ ಸ್ಪಷ್ಟವಾಯಿತು. ಬೇಗ ಚೇತರಿಸಿಕೊಂಡು ಹಳೆಯ ಲಾಲಿತ್ಯದಲ್ಲಿ ಹಾಡಿಗೆ ಹೆಜ್ಜೆ ಹಾಕುವಷ್ಟು ಆತ್ಮಬಲ ಇರುವ ನಟನಿಗೆ ಮೊದಲು ಟಿ.ವಿ. ಮಾಧ್ಯಮ ಅಷ್ಟೇನೂ ಇಷ್ಟವಿರಲಿಲ್ಲ. ಈಗ ಅದು ಕೂಡ ಇರುವಿಕೆಯ ಹೆದ್ದಾರಿಯಂತೆ ಕಾಣತೊಡಗಿದೆ. ಅವರ ಕನ್ನಡ ಇತ್ತೀಚೆಗೆ ಸಾಕಷ್ಟು ಸುಧಾರಿಸಿದೆ. ಇದನ್ನು ಒಪ್ಪಿಕೊಳ್ಳುವುದು ಅವರ ದೊಡ್ಡ ಗುಣ.

**● ವಿಶಾಖ ಎನ್.**

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68